ಚರಕ ಪ್ರಾತ್ಯಕ್ಷಿಕೆ ನೀಡಿದ್ದರು. ಅದೇನು ವಿಸ್ಮಯ ಘಟಿಸಿತೋ ತಿಳಿಯದು, ಆದರೆ ಆ ಕ್ಷಣವೇ ನನಗೆ ಚರಕ ಬೇಕೇ ಬೇಕು ಎಂದು ಅನಿಸಿದ್ದಂತೂ ಹೌದು.

ಶಿಬಿರ ಮುಗಿಸಿಕೊಂಡು ವಾಪಸ್ ಧಾರವಾಡಕ್ಕೆ ಬಂದ ಕೂಡಲೇ ನಾನು ಸಚ್ಚಿದಾನಂದ ಅವರನ್ನು ಸಂಪರ್ಕಿಸಿದೆ. ಆದಷ್ಟು ಬೇಗನೆ ಧಾರವಾಡಕ್ಕೆ ಬರಬೇಕು ಮತ್ತು ನಮಗೆ ಚರಕ ಹೇಗೆ ನಡೆಸುವುದು ಎಂಬುದರ ತರಬೇತಿ ಕೊಡಬೇಕು ಎಂದು ಕೇಳಿಕೊಂಡೆ. ನನ್ನ ಕೋರಿಕೆಯ ಮೇರೆಗೆ, ಸಚ್ಚಿದಾನಂದ, ಅಭಿಲಾಶ್ ಮತ್ತು ಸುಮುಖ – ಈ ಮೂವರು ಧಾರವಾಡಕ್ಕೆ ಬಂದು, 2022ರ ನವೆಂಬರ್ 12ರಿಂದ ಈ ಮೂರು ದಿನಗಳ ಕಾಲ ನಮ್ಮ 'ಸುಮನ ಸಂಗಮ ಕಾಡು ತೋಟ'ದಲ್ಲಿ ಚರಕಾ ಶಿಬಿರ ನಡೆಸಿಕೊಟ್ಟರು. 15 ಜನ ಆ ಶಿಬಿರದಲ್ಲಿ ಭಾಗವಹಿಸಿ ಚರಕ ನೂಲುವುದನ್ನು ಕಲಿತೆವು. ವೈಯಕ್ತಿಕವಾಗಿ ಈ ಶಿಬಿರ ಒಂದು ಅರ್ಥದಲ್ಲಿ ನನ್ನ ಬದುಕನ್ನೇ ಬದಲಿಸಿಬಿಟ್ಟಿತು. ಅಂದಿನಿಂದ ಇಂದಿನವರೆಗೆ ನಾನು ಪ್ರತಿನಿತ್ಯವೂ ತಪ್ಪದೆ ಚರಕದಿಂದ ನೂಲು ತೆಗೆದಿದ್ದೇನೆ. ಮುಂಬೈ, ಅಥಣಿ, ತುಮಕೂರು – ಹೀಗೆ ಬೇರೆ ಬೇರೆ ಊರುಗಳಿಗೆ ಹೋದಾಗಲೂ ಜೊತೆಗೆ ಚರಕ ಒಯ್ದು ಅಲ್ಲಿ ನೂಲು ತೆಗೆದಿದ್ದೇನೆ. ಅಷ್ಟೇ ಅಲ್ಲ, ನಾನು ತೆಗೆದ ನೂಲನ್ನು ಧಾರವಾಡದ ಸಮೀಪದ ಹೆಬ್ಬಳ್ಳಿಯ ಖಾದಿ ಕೇಂದ್ರಕ್ಕೆ ಕೊಟ್ಟಿರುವೆ. ಅಲ್ಲಿಯ ನೇಕಾರರು ನನಗೆ ಖಾದಿ ಬಟ್ಟೆಯನ್ನು ನೇಯ್ದು ಕೊಟ್ಟಿದ್ದಾರೆ. ಆ ಬಟ್ಟೆಯಿಂದ ನಾನು ಎರಡು ಅಂಗಿಗಳನ್ನು ಹೊಲಿಸಿಕೊಂಡು, ಅವುಗಳನ್ನು ಬಹಳ ಸಂತೋಷದಿಂದ ಮತ್ತು ಒಂದು ವಿಲಕ್ಷಣ ಅಭಿಮಾನದಿಂದ ಧರಿಸುತ್ತಾ ಬಂದಿದ್ದೇನೆ. ಈ ಸಂತೋಷ, ಈ ಅಭಿಮಾನ, ಯಾಕಾಗಿ? ಅರ್ಥಾತ್, ಚರಕ ಏಕೆ? ನೂಲುವುದು ಏಕೆ? ಈಗಲೂ ಏಕೆ?

ಚರಕ ಎಂಬುದರ ಚರಿತ್ರೆ ನಮಗೆಲ್ಲ ಅಲ್ಪ ಸ್ವಲ್ಪವಾದರೂ ಪರಿಚಿತ. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಅದನ್ನು ಒಂದು ಪ್ರಮುಖ ಅಸ್ತ್ರವಾಗಿಸಿದ್ದರು ಮತ್ತು ಖಾದಿಯನ್ನು ನಮ್ಮ ಇಡೀ ಸ್ವಾತಂತ್ರ್ಯ ಹೋರಾಟದ ಸಂಕೇತವನ್ನಾಗಿ ಮಾಡಿದ್ದರು. ಸ್ವಾತಂತ್ರ್ಯ ಗಳಿಸಿ ಆಗಲೇ 75 ವರ್ಷಗಳು ಗತಿಸಿ ಹೋಗಿವೆ. ಈಗ ನಾವು 'ಆಜಾದಿ ಕಾ ಅಮೃತ ಮಹೋತ್ಸವ' ಆಚರಿಸುತ್ತಿದ್ದೇವೆ. ವಿಜ್ಞಾನ–ತಂತ್ರಜ್ಞಾನ ಇಷ್ಟು ಮುಂದುವರಿದಿರುವಾಗ, ನಮ್ಮ ಬದುಕಿನಲ್ಲಿ ಕಲ್ಪನಾತೀತ ಬದಲಾವಣೆಗಳಾಗಿರುವಾಗ, ಈಗ ಚರಕ ನಮಗೆ ಪ್ರಸ್ತುತವೆ? ಒಂದು ಮಾತನ್ನು ಇಲ್ಲಿಯೇ ಸ್ಪಷ್ಟಪಡಿಸುವುದು ಒಳ್ಳೆಯದು. ನಾನು ಚರಕದ ಚರಿತ್ರೆ, ಸ್ವಾತಂತ್ರ್ಯ ಹೋರಾಟ, ಗಾಂಧೀಜಿ – ಇದಾವುದನ್ನೂ ಇನ್ನು ಮುಂದೆ ಪ್ರಸ್ತಾಪಿಸುವುದಿಲ್ಲ. ಚರಕ ನಮಗೆ ಇಂದು ಏಕೆ ಬೇಕು ಮತ್ತು ನಾಳೆ ಏಕೆ ಬೇಕು? ಎನ್ನುವುದನ್ನು ಮಾತ್ರ ಜಾಗತಿಕ, ಸಾಮಾಜಿಕ ಮತ್ತು ವೈಯಕ್ತಿಕ – ಈ ಮೂರು ಆಯಾಮಗಳಲ್ಲಿ ವಿವರಿಸಲು ಪ್ರಯತ್ನಿಸುತ್ತೇನೆ.

ಜಾಗತಿಕ ಮಟ್ಟದಲ್ಲಿ ನಾವೆಲ್ಲರೂ– ಕೇವಲ ಮನುಷ್ಯರಷ್ಟೇ ಅಲ್ಲ ಸಮಸ್ತ ಜೀವ ಸಂಕುಲವೇ– ಹವಾಮಾನ ಸಂಕಷ್ಟ ಮತ್ತು ಭೂತಾಪ ಹೆಚ್ಚಳದ ಅತ್ಯಂತ ಘೋರ ಸಮಸ್ಯೆ ಎದುರಿಸುತ್ತಿರುವುದು ಸುಸ್ಪಷ್ಟವಾಗಿದೆ. ಇದರ ಹತ್ತಾರು ದುಷ್ಪರಿಣಾಮಗಳನ್ನೂ ನಾವು ಅನುಭವಿಸುತ್ತಿದ್ದೇವೆ. ಈ ಸಮಸ್ಯೆಗೆ ಮೂಲ ಕಾರಣ, ನಮ್ಮ ಪರಿಸರನಾಶಕ ಜೀವನಶೈಲಿಯೇ ಎಂಬುದು ಇವತ್ತು ನಿರ್ವಿವಾದಿತವಾಗಿ ಗೊತ್ತಾಗಿದೆ. ಪರಿಸರ ವಿಜ್ಞಾನಿಗಳು ಈಗ ಸಮಸ್ತ ಜೀವ ಸಂಕುಲವು ಆರನೆಯ ಮಹಾಜೀವನಾಶದ ಪ್ರಕ್ರಿಯೆಯ ಒಳಗಿದೆ ಎಂದು ಹೇಳುತ್ತಿದ್ದಾರೆ ಹಾಗೂ ಈ ವಿನಾಶ ಸಂಪೂರ್ಣವಾಗಿ ಮಾನವ ನಿರ್ಮಿತವಾದದ್ದು ಎಂದೂ ಹೇಳುತ್ತಿದ್ದಾರೆ.



ಹಾಗಾಗಿಯೇ ಇವತ್ತು ಜಗತ್ತಿನ ಎಲ್ಲಾ ಕಡೆಗಳಲ್ಲಿ ಸುಸ್ಥಿರತೆ, ಪರಿಸರ ಸಂರಕ್ಷಣೆ, ಪರಿಸರಸ್ನೇಹಿ ಕೃಷಿ, ಹಸಿರು ಉದ್ಯಮಗಳು, ಶೂನ್ಯ ಇಂಗಾಲದ ಜೀವನಶೈಲಿ ಮುಂತಾದ ವಿಷಯಗಳು ಹೆಚ್ಚು ಹೆಚ್ಚು ಚರ್ಚೆಯಾಗುತ್ತಿವೆ. ಒಂದು ದೃಷ್ಟಿಯಿಂದ ನೋಡಿದಾಗ, ಈ ಸಮಸ್ಯೆಗಳೆಲ್ಲ ಅತ್ಯಂತ ದೊಡ್ಡವು ಹಾಗೂ ಇವುಗಳ ಪರಿಹಾರಕ್ಕೆ ನಾನೊಬ್ಬ ವ್ಯಕ್ತಿಯಾಗಿ ಏನು ತಾನೆ ಮಾಡಬಲ್ಲೆ ಎಂಬ ಹತಾಶ ಭಾವನೆ ಮೂಡುವುದು ಸಹಜ. ಇನ್ನೊಂದು ದೃಷ್ಟಿಯಿಂದ ನೋಡಿದಾಗ, 'ವೈಯಕ್ತಿಕವೇ ಜಾಗತಿಕ' ಅನ್ನುವ ಸತ್ಯವನ್ನು ಸರಿಯಾಗಿ ಅರ್ಥ ಮಾಡಿಕೊಂಡಾಗ, ನಾನು ಕೇವಲ ಒಬ್ಬ ವ್ಯಕ್ತಿಯಾಗಿಯೂ ಏನಾದರೂ ಮಾಡಬೇಕು ಎಂಬುದು ಮನವರಿಕೆಯಾಗುತ್ತದೆ. ಅದು ಎಷ್ಟೇ ಸಣ್ಣ ಪ್ರಯತ್ನವಾದರೂ ಸರಿ, ಪರಿಹಾರದ ಸಮುದ್ರಕ್ಕೆ ನನ್ನದೂ ಒಂದು ಪುಟ್ಟ ಬೊಗಸೆ ನೀರು ಎಂಬ ತತ್ವದಲ್ಲಿ ವಿಶ್ವಾಸ ಇಟ್ಟುಕೊಂಡು, ನಮ್ಮ ಪಾಲಿನ ಪ್ರಯತ್ನವನ್ನು ನಾವು ಮಾಡಲು ಮುಂದಾಗಬೇಕು. ಹಾಗಾಗಿ, ಹವಾಮಾನ ಸಂಕಷ್ಟ ಮತ್ತು ಭೂತಾಪ ಹೆಚ್ಚಳದಂತಹ ಬೃಹತ್ ಸಮಸ್ಯೆಗಳ ಎದುರು ನಾನೇನು ಮಾಡಬಲ್ಲೆ ಎಂದರೆ, ನನ್ನ ವೈಯಕ್ತಿಕ ಜೀವನವನ್ನು ಸ್ವ ಇಚ್ಛೆಯಿಂದ ಸರಳಗೊಳಿಸಿಕೊಳ್ಳಬಲ್ಲೆ; ಪ್ರಾಕೃತಿಕ ಸಂಪನ್ಮೂಲಗಳ ಬಳಕೆಯನ್ನು ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡಿಕೊಳ್ಳಬಲ್ಲೆ; ಶ್ರಮಜೀವನವನ್ನು ರೂಡಿಸಿಕೊಳ್ಳಬಲ್ಲೆ; ಕೃತಕ ಪರಿಸರನಾಶಕ ಬಟ್ಟೆಗಳನ್ನು ಬಳಸುವ ಬದಲು ಪರಿಸರಸ್ನೇಹಿ ಬಟ್ಟೆಗಳನ್ನು ಬಳಸುತ್ತೇನೆ ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ಈ ಬಟ್ಟೆಗಳನ್ನು ನಾನೇ ತಯಾರು ಮಾಡಿಕೊಳ್ಳುತ್ತೇನೆ ಅನ್ನುವ ಮನೋಸಂಕಲ್ಪ ಮತ್ತು ಪ್ರತಿನಿತ್ಯ ಚರಕ ನೂಲುವುದರ ಮೂಲಕ ಅದನ್ನು ಕಾರ್ಯರೂಪಕ್ಕೆ ತರುವುದು – ಇದು ಇಂದು ನಾವೆಲ್ಲರೂ ತುರ್ತಾಗಿ ಮಾಡಬೇಕಾಗಿರುವ ಸಂಗತಿ.

ಎರಡನೆಯದು ಸಾಮಾಜಿಕ ಆಯಾಮ. ನಾನು ದಿನಾಲು ಚರಕ ತಿರುಗಿಸಿ ನೂಲುತ್ತೇನೆ ಎಂದರೆ ಹತ್ತಿ ಬೆಳೆಯುವ ರೈತರು, ಚರಕ ತಯಾರಿಸುವ ಬಡಿಗರು, ಕಂಬಾರರು, ನೂಲಿನಿಂದ ಬಟ್ಟೆಯನ್ನು ನೇಯುವ ನೇಕಾರರು, ಬಣ್ಣಕಾರರು – ಹೀಗೆ ಸಮಾಜದ ಹಲವು ಬಗೆಯ ಕಾಯಕಜೀವಿಗಳೊಂದಿಗೆ ಒಂದು ಜೀವಂತವಾದ ಸಂಬಂಧವನ್ನು ಏರ್ಪಡಿಸಿಕೊಂಡಂತೆ. ಒಬ್ಬ ವ್ಯಕ್ತಿಯಾಗಿ ನಾನು ದೇಶದ ದೊಡ್ಡ ದೊಡ್ಡ ಸಮಸ್ಯೆಗಳನ್ನು ಪರಿಹರಿಸಲಾರೆ. ಆ ಭ್ರಮೆಯೂ ನನಗಿಲ್ಲ. ಆದರೆ ನನ್ನ ಕೈಲಾದ ಮಟ್ಟಿಗೆ ಸಮಾಜದಲ್ಲಿರುವ ಇತರ ಕಾಯಕಜೀವಿಗಳಿಗೆ ಒಂದಿಷ್ಟು ಸಹಾಯ ಮಾಡಲು ಸಾಧ್ಯವಾದರೆ, ಅದು ಕೂಡ ಅತ್ಯಂತ ಸಮಾಧಾನದ ಸಂಗತಿಯೇ. ನಾನು ಧಾರವಾಡದಲ್ಲಿ ದಿನವೂ ಅರ್ಧ ತಾಸು ನೂಲು ತೆಗೆದರೆ ಯಾವುದೋ ಒಂದು ಹಳ್ಳಿಯಲ್ಲಿ ಒಂದು ನೇಕಾರ ಅಥವಾ ರೈತ ಕುಟುಂಬದಲ್ಲಿ ರೊಟ್ಟಿ ಬೇಯುತ್ತದೆ ಎಂಬ ಈ ಭಾವನೆಯೇ ನನಗೆ ಬಹಳ ಸಮಾಧಾನ ಉಂಟು ಮಾಡುವ ಸಂಗತಿ.

ಕಳೆದ 30 ವರ್ಷಗಳಲ್ಲಿ ನಮ್ಮ ದೇಶದಲ್ಲಿ ಕೇಂದ್ರ ಸರ್ಕಾರದ ಅಧಿಕೃತ ಅಂಕಿ ಅಂಶಗಳ ಪ್ರಕಾರ, ಸುಮಾರು ಮೂರು ಲಕ್ಷ ಅರವತ್ತು ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಗತ್ತಿನ ಬೇರೆ ಯಾವ ದೇಶದಲ್ಲಿಯೂ ಒಂದೇ ವೃತ್ತಿಯ ಇಷ್ಟೊಂದು ಜನರು ಆತ್ಮಹತ್ಯೆ ಮಾಡಿಕೊಂಡಿರುವ ನಿದರ್ಶನ ನಮಗೆ ಸಿಗುವುದಿಲ್ಲ. ಆತ್ಮಹತ್ಯೆ ಮಾಡಿಕೊಂಡಿರುವ ರೈತರಲ್ಲಿ ಬಹುಪಾಲು ಜನರು ಹತ್ತಿ ಬೆಳೆಯುವ ರೈತರಾಗಿದ್ದರು. ನಾವು ನೂರು ಸಾವಿರ ಜನ ಚರಕದಿಂದ ಪ್ರತಿನಿತ್ಯ ನೂಲು ತೆಗೆಯುವುದನ್ನು ಒಂದು ಪವಿತ್ರ ಪರಿಪಾಠವಾಗಿ ಮಾಡಿಕೊಂಡಿದ್ದಾದರೆ, ಹತ್ತಿ ಬೆಳೆಯುವ ರೈತರಿಗೆ ಬದುಕಿನ ಭರವಸೆಯನ್ನು ಕೊಡಲು ಸಾಧ್ಯವಾಗುತ್ತದೆ. ಹತ್ತಿ ಕಟ್ಟಿಗೆ ಎಂಬುದು ಇಂದಿಗೂ ಗ್ರಾಮೀಣ ಭಾರತದಲ್ಲಿ